## ಬಸ್ಸಿಗೆ ಕಲಾತ್ಮಕ ಸ್ಪರ್ಶ!



ಇದು ಯಾವುದೋ ವಸ್ತುಪ್ರದರ್ಶನದ ಪ್ರವೇಶದ್ವಾರ ವಿನ್ಯಾಸ ಅಲ್ಲ ಅಥವಾ ಪ್ರದರ್ಶನಕ್ಕಿಟ್ಟ ಕೋಟೆಕೊತ್ತಳ, ಪಟ್ಟಣದ ಪ್ರತಿಕೃತಿಯೂ ಅಲ್ಲ. ಮಹಾರಾಷ್ಟ್ರದ ಕಲ್ಯಾಣ್ ಮಹಾನಗರ ಪಾಲಿಕೆಯ ಸಾರ್ವಜನಿಕ ಸಾರಿಗೆಯ ವಾಹನ (ಮಿನಿ ಬಸ್ಸು) ಇದಾಗಿದ್ದು, ಇದರ ಹೊರಮೈಯನ್ನು ನಗರದ ಇತಿಹಾಸ ಬಿಂಬಿಸುವ ದೃಶ್ಯಗಳಂತೆ ವಿನ್ಯಾಸಗೊಳಿಸಲಾಗಿದೆ.

ಈ ಬಸ್ಸಿನ ಬಾಗಿಲು ಮತ್ತು ಗಾಜಿನ ಕಿಟಕಿಗಳಿಗೆ ಛತ್ರಪತಿ ಶಿವಾಜಿ ಮಹಾರಾಜ ನಿರ್ಮಿಸಿದ ಕೋಟೆಯ ದ್ವಾರ, ಅಂದಿನ ಅರಮನೆಯ ಕಿಟಕಿ ಮತ್ತು ಪ್ರವೇಶ ದ್ವಾರಗಳ ಪಡಿಯಚ್ಚುಗಳ ಕಲಾಕೃತಿಗಳನ್ನು ಅಳವಡಿಸಿದ್ದು, ಊರೆಲ್ಲಾ ಆ ನಗರದ ಇತಿಹಾಸವನ್ನು ಸಾರುತ್ತಿದೆ. ಮೇಲ್ಛಾವಣಿಯಲ್ಲಿ ಕೋಟೆಗೋಡೆಯ ತುದಿಯ ಅಂಚುಗಳ ಮಾದರಿಯನ್ನು ಗಮನಿಸಬಹುದಾಗಿದೆ.

ನಿರರ್ಥಕ ಜಾಹೀರಾತುಗಳು ಅಥವಾ ಸ್ವಚ್ಛಗೊಳ್ಳದೆ ಅಸ್ವಚ್ಛ ಕೊಳಕು ಹೊರಮೈ ಹೊಂದಿರುವ ಕೆಲವು ಸಾರ್ವಜನಿಕ ಬಸ್ಸುಗಳಿಗೆ ಹೋಲಿಸಿದರೆ ಇತಿಹಾಸ ಪ್ರಜ್ಞೆ ಮೂಡಿಸುವ ಇಂಥಾ ಪ್ರಯತ್ನ ವೈಶಿಷ್ಟ್ಯಪೂರ್ಣವೂ, ಆಕರ್ಷಣೀಯವೂ ಆಗಿದೆ!

—ರಮಣ್ ಶೆಟ್ಟಿ ರೆಂಜಾಳ್, ಮುಂಬೈ



## ‘ಆದಿಶಂಕರ’ನ ಎದುರು ಹನುಮ!

ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೂಕಿನ ಹರಿಹರಪುರದ ಆದಿಶಂಕರಾಚಾರ್ಯ ಶಾರದಾ ಲಕ್ಷ್ಮೀ ನರಸಿಂಹ ಪೀಠದ ಶ್ರೀ ಮಠದ ಆವರಣದಲ್ಲಿ ನೆಲೆಗೊಂಡಿರುವ ಹನುಮನ ಚಿತ್ರವಿದು. ಮಠಕ್ಕೆ ಬರುವ ಭಕ್ತರಿಗೆ ಹನುಮನ ಈ ಮೂರ್ತಿಯು ವಿಶೇಷ ಆಕರ್ಷಣೆಯಾಗಿ ಕಾಣುತ್ತದೆ. ಗುಂಟೂರಿನ ಕಡಪ ಕ್ವಾರಿಯಿಂದ ತರಿಸಿದ ಶಿಲೆಯಲ್ಲಿ ತಿರುಪತಿಯ ರತ್ನಮಾಚಾರಿ ಅವರು ಈ ಮೂರ್ತಿಯನ್ನು ಕೆತ್ತಿದ್ದಾರೆ. ಐದು ಅಡಿಗೊಂದರಂತೆ ನಿರ್ಮಿಸಿರುವ ಮೂರು ಹಂತ(ಮೆಟ್ಟಿಲು)ಗಳ ಮೇಲೆ 27 ಅಡಿ ಎತ್ತರದ ಹನುಮನ ಈ ಮೂರ್ತಿಯು ನೆಲೆಗೊಂಡಿದೆ.

ಐದು ಅಡಿಗೊಂದರಂತೆ ನಿರ್ಮಿಸಿರುವ ಮೆಟ್ಟಿಲುಗಳ ಪ್ರತಿ ಹಂತವೂ ಯೋಗ ಸೂಚಕ ಚಿತ್ರಗಳನ್ನು ಹೊಂದಿದೆ. ಕೆಳಗಿನ ಹಂತ ‘ರೈತ, ಎತ್ತು’ ಚಿತ್ರಗಳನ್ನು ಹೊಂದಿದ್ದು, ಅದು ಕರ್ಮ ಯೋಗವನ್ನು ಸೂಚಿಸುತ್ತದೆ. ಮಧ್ಯದ ಹಂತವು ‘ಹಂಸ’ದ ಚಿತ್ರವನ್ನು ಹೊಂದಿದ್ದು, ಅದು ಜ್ಞಾನ ಯೋಗದ ಸೂಚಕವಾಗಿದೆ. ಕಡೆಯ ಹಂತವು ಭಕ್ತಿ ಯೋಗ ಸೂಚಕವಾಗಿದೆ.

—ಚಾವಲ್ಮನೆ ಸುರೇಶ್ ನಾಯಕ್, ಚಿಕ್ಕಮಗಳೂರು

## ಇದು ವಿಭಿನ್ನ ಮಿಡತೆ!



ಸಾಮಾನ್ಯವಾಗಿ ಮಿಡತೆಯು ಹಸಿರು ಬಣ್ಣದಲ್ಲಿ ವಿಚಿತ್ರ ಆಕಾರದಲ್ಲಿ ಕಂಗೊಳಿಸುತ್ತದೆ. ಆದರೆ, ಈ ಚಿತ್ರದಲ್ಲಿ ಕಾಣುತ್ತಿರುವ ಮಿಡತೆಯ ಮೈಬಣ್ಣ ಕಂದುಬಣ್ಣದಿಂದ ಕೂಡಿದೆ. ಈ ಕೀಟದ ಹೆಸರು ಇಂಡಿಯನ್ ರೋಸ್ ಮಾಂತಿಸ್. ಹಸಿರೆಲೆ ನಡುವೆ ಹಸಿರು ದೇಹವ ಹೊದ್ದು ಕೀಟ ಭಕ್ಷಕಗಳಿಂದ ತನ್ನ ಪ್ರಾಣ ರಕ್ಷಿಸಿಕೊಳ್ಳುವ ಕಿಲಾಡಿತನ ಇದಕ್ಕಿಲ್ಲ. ಒಣಗಿದೆಲೆಯ ಬಣ್ಣದಂತೆ ದೈವದತ್ತವಾಗಿ ಕಂಡುಬರುವ ಈ ಮಿಡತೆಯು ಕೊಂಚ ಡಿಫರೆಂಟ್ ಆಗಿಯೇ ಕಾಣುತ್ತದೆ.

—ರೇಖಾ, ಹಾಲಾಡಿ


## ನೀವೂ ಬರೆಯಿರಿ

‘ಸುಧಾ’ ವಾರಪತ್ರಿಕೆಯಲ್ಲಿ ಪ್ರಕಟವಾಗುವ ‘ನಿಮ್ಮ ಪುಟ’ ಓದುಗರ ಅಂಕಣಕ್ಕೆ ನಿಮ್ಮ ಸುತ್ತಮುತ್ತಲಿನ ವಿಶೇಷ ಸಂಗತಿಗಳ ಬಗ್ಗೆ ನೂರು ಪದಗಳ ಬರಹ ಮತ್ತು ಅದಕ್ಕೆ ಸಂಬಂಧಿಸಿದ ಚೆಂದದ ಫೋಟೊವನ್ನು ನಮಗೆ ಕಳುಹಿಸಿಕೊಡಿ.

**ವಿಳಾಸ:** editorsu@sudha.co.in

@SudhaWeekly